Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड–4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |


## MINISTRY OF LAW AND JUSTICE
### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂ ವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಥನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ವಿದೇಶೀಯರ ಅಧಿನಿಯಮ, 1946

## (1946ರ ಸಂಖ್ಯೆ 31)

[23ನೇ ನವೆಂಬರ್, 1946.]

ವಿದೇಶೀಯರಿಗೆ ಸಂಬಂಧಿಸಿದಂತೆ ಕೆಲವು ಅಧಿಕಾರಗಳನ್ನು ಕೇಂದ್ರ ಸರ್ಕಾರಕ್ಕೆ ಪ್ರದಾನ ಮಾಡುವ ಅಧಿನಿಯಮ.

ಭಾರತದೊಳಗೆ ವಿದೇಶೀಯರು ಪ್ರವೇಶಿಸುವುದಕ್ಕೆ, ಅವರು ಇಲ್ಲಿ ಇರುವುದಕ್ಕೆ ಮತ್ತು ಇಲ್ಲಿಂದ ಅವರು ನಿರ್ಗಮಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು, ಕೆಲವು ಅಧಿಕಾರಗಳನ್ನು ಚಲಾಯಿಸುವುದಕ್ಕೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಈ ಮೂಲಕ ಮುಂದಿನಂತೆ ಅಧಿನಿಯಮಿಸಲಾಗಿದೆ, ಎಂದರೆ:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ವಿದೇಶೀಯರ ಅಧಿನಿಯಮ, 1946 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ,–

(ಎ) "ವಿದೇಶೀಯ" ಎಂದರೆ, ಭಾರತದ ನಾಗರಿಕನಾಗಿರದ ಒಬ್ಬ ವ್ಯಕ್ತಿ;

(ಬಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಆದೇಶಗಳ ಮೇರೆಗೆ ನಿಯಮಿಸಲಾದುದು;

(ಸಿ) "ನಿರ್ದಿಷ್ಟಪಡಿಸಲಾದುದು" ಎಂದರೆ, ಒಂದು ನಿಯಮಿಸಲಾದ ಪ್ರಾಧಿಕಾರದ ನಿರ್ದೇಶನದ ಮೂಲಕ ನಿರ್ದಿಷ್ಟಪಡಿಸಲಾದುದು.

**3. ಆದೇಶಗಳನ್ನು ಮಾಡಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಆದೇಶದ ಮೂಲಕ ಸಾಮಾನ್ಯವಾಗಿ ಅಥವಾ ಎಲ್ಲಾ ವಿದೇಶೀಯರಿಗೆ ಸಂಬಂಧಪಟ್ಟಂತೆ ಅಥವಾ ಯಾರೇ ನಿರ್ದಿಷ್ಟ ವಿದೇಶೀಯನಿಗೆ ಅಥವಾ ಯಾವುದೇ ನಿಯಮಿಸಲಾದ ವರ್ಗದ ಅಥವಾ ವರ್ಣನೆಯ ವಿದೇಶೀಯನಿಗೆ ಸಂಬಂಧಿಸಿದಂತೆ, ಭಾರತದೊಳಗೆ ವಿದೇಶೀಯರ ಪ್ರವೇಶವನ್ನು ಅಥವಾ ಅಲ್ಲಿಂದ ಅವರು ಹೊರಡುವುದನ್ನು ಅಥವಾ ಅವರು ಅಲ್ಲಿ ಅವರ ಇರುವಿಕೆ ಅಥವಾ ಇಲ್ಲಿ ಅವರ ಮುಂದುವರೆಯುವಿಕೆಯನ್ನು ನಿಷೇಧಿಸುವುದಕ್ಕಾಗಿ, ನಿಯಂತ್ರಿಸುವುದಕ್ಕಾಗಿ ಅಥವಾ ಪ್ರತಿಬಂಧಿಸುವುದಕ್ಕಾಗಿ ಉಪಬಂಧ ಕಲ್ಪಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಈ ಪ್ರಕರಣದಡಿಯಲ್ಲಿ ಮಾಡಿದ ಆದೇಶಗಳು, ವಿದೇಶೀಯನು,–

(ಎ) ಭಾರತವನ್ನು ಪ್ರವೇಶಿಸತಕ್ಕದ್ದಲ್ಲ ಅಥವಾ ನಿಯಮಿಸಬಹುದಾದಂಥ ಕಾಲಗಳಲ್ಲಿ ಮತ್ತು ಅಂಥ ಮಾರ್ಗದ ಮೂಲಕ ಅಂಥ ಬಂದರಿನಿಂದ ಅಥವಾ ಸ್ಥಳದಿಂದ ಮಾತ್ರ ಮತ್ತು ಪ್ರವೇಶಿಸಿದಾಗ ಪಾಲಿಸಬೇಕಾದ ಅಂಥ ಷರತ್ತುಗಳಿಗೊಳಪಟ್ಟು ಮಾತ್ರ ಭಾರತವನ್ನು ಪ್ರವೇಶಿಸತಕ್ಕದ್ದೆಂದು;

(ಬಿ) ಭಾರತದಿಂದ ನಿರ್ಗಮಿಸತಕ್ಕದ್ದಲ್ಲ ಅಥವಾ ನಿಯಮಿಸಬಹುದಾದಂಥ ಕಾಲಗಳಲ್ಲಿ ಮತ್ತು ಅಂಥ ಮಾರ್ಗದ ಮೂಲಕ ಅಂಥ ಬಂದರಿನಿಂದ ಅಥವಾ ಸ್ಥಳದಿಂದ ಮಾತ್ರ ಮತ್ತು ನಿರ್ಗಮಿಸುವಾಗ ಪಾಲಿಸಬೇಕಾದ ಅಂಥ ಷರತ್ತುಗಳಿಗೊಳಪಟ್ಟು ಮಾತ್ರ ಭಾರತವನ್ನು ನಿರ್ಗಮಿಸತಕ್ಕದ್ದೆಂದು;

(ಸಿ) ಭಾರತದಲ್ಲಿ ಅಥವಾ ಅದರಲ್ಲಿನ ನಿಯಮಿಸಲಾದ ಯಾವುದೇ ಪ್ರದೇಶದಲ್ಲಿ ಉಳಿಯತಕ್ಕದ್ದಲ್ಲವೆಂದು;

(ಸಿಸಿ) ಭಾರತದಲ್ಲಿ ಉಳಿಯತಕ್ಕದ್ದಲ್ಲವೆಂದು ಈ ಪ್ರಕರಣದ ಅಡಿಯಲ್ಲಿನ ಆದೇಶದ ಮೂಲಕ ಅಗತ್ಯಪಡಿಸಲಾಗಿದ್ದರೆ, ಭಾರತದಿಂದ ಅವನನ್ನು ಹೊರಗೆ ಹಾಕುವ ಸಂಬಂಧದಲ್ಲಿನ ವೆಚ್ಚಗಳನ್ನು ಮತ್ತು ಹಾಗೆ ಹಾಕುವವರೆಗಿನ ಅವನ ನಿರ್ವಹಣೆಯ ವೆಚ್ಚಗಳನ್ನು ಅವನು ತನ್ನಲ್ಲಿರುವ ಯಾವುದೇ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದೆಂದು;

(ಡಿ) ಭಾರತದಲ್ಲಿ ನಿಯಮಿಸಬಹುದಾದಂಥ ಪ್ರದೇಶಕ್ಕೆ ತಾನಾಗಿಯೇ ಹೋಗತಕ್ಕದ್ದೆಂದು ಮತ್ತು ಅಲ್ಲಿ ಉಳಿಯತಕ್ಕದ್ದೆಂದು;

(ಇ) ಇವರನ್ನು,–

(i) ಒಂದು ನಿರ್ದಿಷ್ಟ ಸ್ಥಳದಲ್ಲಿ ವಾಸಿಸಬೇಕೆಂದು ಅಗತ್ಯಪಡಿಸುವ;

(ii) ಅವನ ಚಲನವಲನಗಳ ಮೇಲೆ ಯಾವುವೇ ನಿರ್ಬಂಧಗಳನ್ನು ವಿಧಿಸುವ;

(iii) ನಿಯಮಿಸಬಹುದಾದ ಅಥವಾ ನಿರ್ದಿಷ್ಟಪಡಿಸಬಹುದಾದ ಅವನ ಗುರುತಿನ ಬಗ್ಗೆ ಅಂಥ ರುಜುವಾತನ್ನು ಒದಗಿಸಲು ಮತ್ತು ಅಂಥ ವಿವರಗಳನ್ನು ಅಂಥ ಪ್ರಾಧಿಕಾರಕ್ಕೆ ಅಂಥ ರೀತಿಯಲ್ಲಿ ಮತ್ತು ಅಂಥ ಕಾಲ ಮತ್ತು ಸ್ಥಳದಲ್ಲಿ ಒದಗಿಸಲು ಆತನನ್ನು ಅಗತ್ಯಪಡಿಸುವ;

(iv) ನಿಯಮಿಸಬಹುದಾದಂಥ ಮತ್ತು ನಿರ್ದಿಷ್ಟಪಡಿಸಬಹುದಾದಂಥ ಅವನ ಭಾವಚಿತ್ರವನ್ನು ಮತ್ತು ಬೆರಳು ಗುರುತುಗಳನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲು

ಮತ್ತು ಅಂಥ ಪ್ರಾಧಿಕಾರಕ್ಕೆ, ಅಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ತನ್ನ ಕೈಬರಹದ ಹಾಗೂ ಸಹಿಗಳ ಮಾದರಿಗಳನ್ನು ಒದಗಿಸಲು ಅವನನ್ನು ಅಗತ್ಯಪಡಿಸುವ;

(v) ನಿಯಮಿಸಬಹುದಾದ ಅಥವಾ ನಿರ್ದಿಷ್ಟಪಡಿಸಬಹುದಾದ ಅಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಮತ್ತು ಅಂಥ ಪ್ರಾಧಿಕಾರದ ಮೂಲಕ ಅಂಥ ವೈದ್ಯಕೀಯ ಪರೀಕ್ಷೆಗೆ ಅವನು ಒಳಗಾಗುವಂತೆ ಅಗತ್ಯಪಡಿಸುವ;

(vi) ನಿಯಮಿಸಬಹುದಾದ ಅಥವಾ ನಿರ್ದಿಷ್ಟಪಡಿಸಬಹುದಾದ ವಿವರಣೆಯುಳ್ಳ ವ್ಯಕ್ತಿಗಳೊಡನೆ ಸೇರುವುದನ್ನು ನಿಷೇಧಿಸುವ;

(vii) ನಿಯಮಿಸಬಹುದಾದ ಅಥವಾ ನಿರ್ದಿಷ್ಟಪಡಿಸಬಹುದಾದ ಚಟುವಟಿಕೆಗಳಲ್ಲಿ ತೊಡಗುವುದನ್ನು ನಿಷೇಧಿಸುವ;

(viii) ನಿಯಮಿಸಲಾದ ಮತ್ತು ನಿರ್ದಿಷ್ಟಪಡಿಸಲಾದ ವಸ್ತುಗಳನ್ನು ಬಳಸುವುದನ್ನು ಅಥವಾ ಸ್ವಾಧೀನತೆ ಹೊಂದಿರುವುದನ್ನು ನಿಷೇಧಿಸುವ;

(ix) ನಿಯಮಿಸಬಹುದಾದಂಥ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಅವನ ಯಾವುದೇ ವಿಶಿಷ್ಟ ನಡತೆಯನ್ನು ಅನ್ಯಥಾ ನಿಯಂತ್ರಿಸುವ

– ಸಂಬಂಧದಲ್ಲಿ ನಿಯಮಿಸಬಹುದಾದಂಥ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳನ್ನು ಪಾಲಿಸತಕ್ಕದ್ದೆಂದು;

(ಎಫ್) ನಿಯಮಿಸಬಹುದಾದ ಅಥವಾ ನಿರ್ದಿಷ್ಟಪಡಿಸಬಹುದಾದ ಯಾವುದೇ ಅಥವಾ ಎಲ್ಲಾ ನಿರ್ಬಂಧಗಳನ್ನು ಅಥವಾ ಷರತ್ತುಗಳನ್ನು ಸೂಕ್ತವಾಗಿ ಪಾಲಿಸುವ ಅಥವಾ ಜಾರಿಗೊಳಿಸುವುದಕ್ಕೆ ಪರ್ಯಾಯವಾಗಿ ಜಾಮೀನು ಸಹಿತವಾಗಿ ಅಥವಾ ಜಾಮೀನು ಇಲ್ಲದೆ ಮುಚ್ಚಳಿಕೆ ಬರೆದುಕೊಡತಕ್ಕದ್ದೆಂದು;

(ಜಿ) ಅವನನ್ನು ದಸ್ತಗಿರಿ ಮಾಡತಕ್ಕದ್ದೆಂದು ಮತ್ತು ಸ್ಥಾನಬದ್ಧತೆಯಲ್ಲಿಡತಕ್ಕದ್ದೆಂದು ಅಥವಾ ಬಂಧನದಲ್ಲಿಡತಕ್ಕದ್ದೆಂದು

– ಉಪಬಂಧಿಸಬಹುದು ಮತ್ತು ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ವಿಷಯದ ಬಗ್ಗೆ ಮತ್ತು ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಈ ಅಧಿನಿಯಮವನ್ನು ಜಾರಿಗೆ ತರಲು ಸೂಕ್ತ ಅಥವಾ ಅವಶ್ಯಕವಾಗಬಹುದಾದಂಥ ಪ್ರಾಸಂಗಿಕ ಮತ್ತು ಪೂರಕ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

(3) ಈ ಸಂಬಂಧದಲ್ಲಿ ನಿಯಮಿಸಲಾದ ಯಾವುದೇ ಪ್ರಾಧಿಕಾರವು, ಯಾರೇ ವಿಶಿಷ್ಟ ವಿದೇಶೀಯನಿಗೆ ಸಂಬಂಧಿಸಿದಂತೆ (2)ನೇ ಉಪಪ್ರಕರಣದ (ಇ) ಖಂಡದ ಅಥವಾ (ಎಫ್) ಖಂಡದ ಅಡಿಯಲ್ಲಿ ಆದೇಶಗಳನ್ನು ಮಾಡಬಹುದು.

**3ಎ. ಕೆಲವು ಸಂದರ್ಭಗಳಲ್ಲಿ ಅಧಿನಿಯಮದ ಅನ್ವಯದಿಂದ ಕಾಮನ್‌ವೆಲ್ತ್ ರಾಷ್ಟ್ರದ ನಾಗರಿಕರನ್ನು ಮತ್ತು ಇತರ ವ್ಯಕ್ತಿಗಳನ್ನು ವಿನಾಯಿತಿಗೊಳಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಆದೇಶದ ಮೂಲಕ ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳ ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ಆದೇಶವು,–

(ಎ) ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಕಾಮನ್‌ವೆಲ್ತ್ ರಾಷ್ಟ್ರದ ನಾಗರಿಕರಿಗೆ ಸಂಬಂಧಿಸಿದಂತೆ; ಅಥವಾ

(ಬಿ) ಇತರ ಯಾರೇ ವಿದೇಶೀಯನಿಗೆ ಅಥವಾ ಒಂದು ವರ್ಗದ ಅಥವಾ ವಿವರಣೆಯ ವಿದೇಶೀಯನಿಗೆ ಸಂಬಂಧಿಸಿದಂತೆ

– ಅನ್ವಯವಾಗತಕ್ಕದ್ದಲ್ಲ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮಾತ್ರ ಅಥವಾ ಅಂಥ ವಿನಾಯಿತಿಗಳು ಅಥವಾ ಮಾರ್ಪಾಡುಗಳೊಡನೆ ಅಥವಾ ಅಂಥ ಷರತ್ತುಗಳಿಗೊಳಪಟ್ಟು ಮಾತ್ರ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಎರಡೂ ಸದನಗಳ ಮುಂದಿಡತಕ್ಕದ್ದು.

**4. ಸ್ಥಳ ನಿರ್ಬಂಧಿತ.–** (1) ಯಾವ ವಿದೇಶೀಯನಿಗೆ (ಇದರಲ್ಲಿ ಇನ್ನು ಮುಂದೆ ಸ್ಥಾನಬದ್ಧ ಎಂದು ಉಲ್ಲೇಖಿಸಲಾಗಿದೆ) ಸಂಬಂಧಿಸಿದಂತೆ 3ನೇ ಪ್ರಕರಣದ (2)ನೇ ಉಪಪ್ರಕರಣದ (ಜಿ) ಖಂಡದ ಮೇರೆಗೆ ಮಾಡಿದ ಅವನನ್ನು ಬಂಧಿಸಿಡತಕ್ಕದ್ದು ಅಥವಾ ತಡೆದಿಡತಕ್ಕದ್ದು ಎಂದು ನಿರ್ದೇಶಿಸುವ ಯಾವುದೇ ಆದೇಶವು, ಜಾರಿಯಲ್ಲಿದೆಯೋ ಆ ವಿದೇಶೀಯನನ್ನು, ನಿರ್ವಹಣೆ, ಶಿಸ್ತು ಮತ್ತು ಅಪರಾಧಗಳ ಶಿಕ್ಷೆ ಮತ್ತು ಶಿಸ್ತು ಭಂಗಕ್ಕಾಗಿ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಆದೇಶದ ಮೂಲಕ ನಿರ್ಧರಿಸಬಹುದಾದಂಥ ಸ್ಥಳದಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ತಡೆಹಿಡಿದಿಡತಕ್ಕದ್ದು ಅಥವಾ ಬಂಧಿಸಿಡತಕ್ಕದ್ದು.

(2) ಯಾವ ವಿದೇಶೀಯನಿಗೆ ಸಂಬಂಧಿಸಿದಂತೆ 3ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ಅಡಿಯಲ್ಲಿ ಅನೇಕ ವಿದೇಶೀಯರ ಮೇಲ್ವಿಚಾರಣೆಯಲ್ಲಿ ಮೀಸಲಿಟ್ಟ ಸ್ಥಳದಲ್ಲಿ ವಾಸಿಸಬೇಕೆಂದು ಆದೇಶವು ಯಾರನ್ನು ಅಗತ್ಯಪಡಿಸುವ ಜಾರಿಯಲ್ಲಿದೆಯೋ ಆ ವಿದೇಶೀಯನು (ಇದರಲ್ಲಿ ಇನ್ನು ಮುಂದೆ

ಪೆರೋಲಿನ ಮೇಲಿರುವ ವ್ಯಕ್ತಿಯೆಂದು ಉಲ್ಲೇಖಿಸಲಾಗಿದೆ) ಅಲ್ಲಿ ವಾಸಿಸುವಾಗ, ನಿರ್ವಹಣೆ, ಶಿಸ್ತು ಮತ್ತು ಅಪರಾಧಗಳಿಗಾಗಿ ಶಿಕ್ಷೆ ಹಾಗೂ ಶಿಸ್ತು ಭಂಗಕ್ಕಾಗಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(3) ಯಾವ ವ್ಯಕ್ತಿಯು,–

(ಎ) ತಿಳಿದೂ, ತಿಳಿದೂ, ಒಬ್ಬ ಸ್ಥಳ ನಿರ್ಬಂಧದಲ್ಲಿರುವ ಅಥವಾ ಪೆರೋಲಿನ ಮೇಲಿರುವ ವ್ಯಕ್ತಿಗೆ ಅಭಿರಕ್ಷೆಯಿಂದ ಅಥವಾ ಅವನ ವಾಸಕ್ಕಾಗಿ ಮೀಸಲಿಟ್ಟ ಸ್ಥಳದಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡತಕ್ಕದ್ದಲ್ಲ ಅಥವಾ ತಿಳಿದೂ ತಿಳಿದೂ, ತಪ್ಪಿಸಿಕೊಂಡಿದ್ದ ಸ್ಥಳ ನಿರ್ಬಂಧದಲ್ಲಿರುವ ಅಥವಾ ಪೆರೋಲಿನ ಮೇಲಿರುವ ವ್ಯಕ್ತಿಗೆ ಆಶ್ರಯ ಕೊಡತಕ್ಕದ್ದಲ್ಲ; ಅಥವಾ

(ಬಿ) ತಪ್ಪಿಸಿಕೊಂಡಿರುವ ಸ್ಥಳ ನಿರ್ಬಂಧದಲ್ಲಿರುವ ಅಥವಾ ಪೆರೋಲಿನ ಮೇಲಿರುವ ವ್ಯಕ್ತಿಯ ದಸ್ತಗಿರಿ ಮಾಡುವ ಅಡ್ಡಿಯುಂಟು ಮಾಡುವ, ಆತಂಕವನ್ನುಂಟು ಮಾಡುವ ಅಥವಾ ಹಸ್ತಕ್ಷೇಪ ಮಾಡುವ ಅಥವಾ ಹಸ್ತಕ್ಷೇಪ ಮಾಡುವ ಉದ್ದೇಶದಿಂದ ಯಾವುದೇ ಸಹಾಯವನ್ನು ಮಾಡತಕ್ಕದ್ದಲ್ಲ.

(4) ಕೇಂದ್ರ ಸರ್ಕಾರವು, ಆದೇಶದ ಮೂಲಕ ಭಾರತದಲ್ಲಿ, ಸಂದರ್ಭಾನುಸಾರ, ಸ್ಥಳ ನಿರ್ಬಂಧದಲ್ಲಿರುವ ಅಥವಾ ಪೆರೋಲಿನ ಮೇಲಿರುವ ವ್ಯಕ್ತಿಗಳನ್ನು ತಡೆದಿಟ್ಟಿರುವ ಅಥವಾ ನಿರ್ಬಂಧಿಸಿರುವ ಸ್ಥಳಗಳಲ್ಲಿ ಪ್ರವೇಶಿಸುವ ಮತ್ತು ಅದರೊಳಗೆ ವ್ಯಕ್ತಿಗಳು ನಡೆದುಕೊಳ್ಳಬೇಕಾದ ರೀತಿ ಬಗ್ಗೆ ನಿಯಂತ್ರಿಸಲು ಹಾಗೂ ಅಂಥ ಸ್ಥಳಗಳ ಹೊರಗಡೆಯಿಂದ ಅಲ್ಲಿರುವ ಸ್ಥಳ ನಿರ್ಬಂಧದಲ್ಲಿರುವ ಅಥವಾ ಪೆರೋಲಿನ ಮೇಲಿರುವ ವ್ಯಕ್ತಿಗಳಿಗೆ ಅಥವಾ ಅವರಿಗಾಗಿ ನಿಯಮಿಸಬಹುದಾದಂಥ ವಸ್ತುಗಳ ರವಾನೆ ಅಥವಾ ಅವುಗಳ ಸಾಗಾಣಿಕೆಯನ್ನು ನಿಷೇಧಿಸಲು ಅಥವಾ ನಿಯಂತ್ರಿಸಲು ಉಪಬಂಧ ಕಲ್ಪಿಸಬಹುದು.

**5. ಹೆಸರಿನ ಬದಲಾವಣೆ.–** (1) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ಭಾರತದಲ್ಲಿರುವ ಯಾರೇ ವಿದೇಶೀಯನು ಆ ದಿನಾಂಕದ ತರುವಾಯ ಭಾರತದಲ್ಲಿರುವಾಗ ಸದರಿ ದಿನಾಂಕದ ನಿಕಟಪೂರ್ವದಲ್ಲಿ ತಾನು ಯಾವ ಹೆಸರಿನಿಂದ ಪರಿಚಿತನಾಗಿದ್ದಾನೋ ಆ ಹೆಸರಿಲ್ಲದೆ ಬೇರೆ ಯಾವುದೇ ಹೆಸರನ್ನು ಯಾವುದೇ ಉದ್ದೇಶಕ್ಕಾಗಿ ಸ್ವೀಕರಿಸತಕ್ಕದ್ದಲ್ಲ ಅಥವಾ ಬಳಸತಕ್ಕದ್ದಲ್ಲ ಅಥವಾ ಸ್ವೀಕರಿಸಿರುವಂತೆ ಅಥವಾ ಬಳಸಿರುವಂತೆ ತಾತ್ಪರ್ಯವಾಗತಕ್ಕದ್ದಲ್ಲ.

(2) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕ ತರುವಾಯ ಯಾರೇ ವಿದೇಶೀಯನು (ಒಬ್ಬನೇ ಅಥವಾ ಯಾರೇ ಇತರ ವ್ಯಕ್ತಿಯ ಜೊತೆಯಲ್ಲಿ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವ ಹೆಸರಿನಿಂದ ಅಥವಾ ಅಂಕಿತನಾಮದಿಂದ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುತ್ತಿದ್ದಾನೋ, ಆ

ಹೆಸರು ಅಥವಾ ಅಂಕಿತನಾಮವಲ್ಲದ ಯಾವುದೇ ಹೆಸರಿನಿಂದ ಅಥವಾ ಅಂಕಿತನಾಮದಿಂದ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುತ್ತಿದ್ದನೆಂದು ಅಥವಾ ನಡೆಸುತ್ತಿರುವನೆಂದು ತಾತ್ಪರ್ಯವಾದರೆ ಅವನನ್ನು (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅವನು ಯಾವ ಹೆಸರಿನಿಂದ ಸಾಮಾನ್ಯವಾಗಿ ಪರಿಚಿತನಾಗಿದ್ದಾನೋ ಆ ಹೆಸರಿಗಿಂತ ಬೇರೆಯಾದ ಹೆಸರನ್ನು ಬಳಸುತ್ತಿದ್ದಾನೆಂದು ಭಾವಿಸತಕ್ಕದ್ದು.

(3) ಈ ಅಧಿನಿಯಮವು ಯಾವ ದಿನಾಂಕದಂದು ಜಾರಿಗೆ ಬಂದಿತೋ ಆ ದಿನಾಂಕದಂದು ಭಾರತದಲ್ಲಿಲ್ಲದ ಮತ್ತು ಆ ತರುವಾಯ ಭಾರತದಲ್ಲಿ ಪ್ರವೇಶಿಸಿದ ಯಾರೇ ವಿದೇಶೀಯನ ಸಂಬಂಧದಲ್ಲಿ (1)ನೇ ಮತ್ತು (2)ನೇ ಉಪಪ್ರಕರಣಗಳು ಯಾವ ದಿನಾಂಕದಂದು ಈ ಅಧಿನಿಯಮವು ಜಾರಿಗೆ ಬಂದಿತೋ ಆ ದಿನಾಂಕದ ಸಂಬಂಧದಲ್ಲಿ ಆ ಉಪಪ್ರಕರಣಗಳಲ್ಲಿನ ಯಾವುದೇ ಉಲ್ಲೇಖಕ್ಕೆ ಬದಲಾಗಿ ಆ ತರುವಾಯ ಯಾವ ದಿನಾಂಕದಂದು ಅವನು ಮೊದಲು ಭಾರತದೊಳಗೆ ಪ್ರವೇಶಿಸಿದನೋ ಆ ದಿನಾಂಕದ ಬಗ್ಗೆ ಉಲ್ಲೇಖವನ್ನು ಪ್ರತಿನಿಯೋಜಿಸಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಹೆಸರು" ಎಂಬುದು ಅಡ್ಡ ಹೆಸರನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಹೆಸರಿನ ಅಕ್ಷರಗಳು ವ್ಯತ್ಯಾಸವಾದರೆ ಅದು, ಬದಲಾವಣೆಯೆಂದು ಭಾವಿಸತಕ್ಕದ್ದು.

(5) ಈ ಪ್ರಕರಣದಲ್ಲಿರುವುದು ಯಾವುದೂ,–

(ಎ) ಕೇಂದ್ರ ಸರ್ಕಾರವು ನೀಡಿದ ಲೈಸೆನ್ಸು ಅಥವಾ ಅನುಮತಿಯ ಅನುಸರಣೆಯಲ್ಲಿ ಯಾವುದೇ ಹೆಸರನ್ನು; ಅಥವಾ

(ಬಿ) ಯಾರೇ ವಿವಾಹಿತ ಮಹಿಳೆಯು ತನ್ನ ಪತಿಯ ಹೆಸರನ್ನು

– ಸ್ವೀಕರಿಸುವುದಕ್ಕೆ ಅಥವಾ ಬಳಸುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**6. ಹಡಗುಗಳ ಮಾಸ್ಟರುಗಳ ಹೊಣೆಗಾರಿಕೆಗಳು, ಇತ್ಯಾದಿ.–** (1) ಸಮುದ್ರದ ಮೂಲಕ ಭಾರತದ ಬಂದರಿಗೆ ಬರುವ ಅಥವಾ ಅಲ್ಲಿಂದ ಹೊರಗೆ ಹೋಗುವ ಪ್ರಯಾಣಿಕರನ್ನು ಆ ಬಂದರಿನಲ್ಲಿ ಇಳಿಸುವ ಅಥವಾ ಹತ್ತಿಸಿಕೊಳ್ಳುವ ಮತ್ತು ಭಾರತದ ವಿಮಾನದ ಮೂಲಕ ಯಾವುದೇ ಸ್ಥಳಕ್ಕೆ ಬರುವ ಅಥವಾ ಅಲ್ಲಿಂದ ಹೊರಗೆ ಹೋಗುವ ಪ್ರಯಾಣಿಕರನ್ನು, ಆ ಸ್ಥಳದಲ್ಲಿ ಇಳಿಸುವ ಮತ್ತು ಹತ್ತಿಸಿಕೊಳ್ಳುವ ಯಾವುದೇ ವಿಮಾನದ ಚಾಲಕನು, ನಿಯಮಿಸಬಹುದಾದಂಥ ವ್ಯಕ್ತಿಗೆ ಮತ್ತು ಅಂಥ ರೀತಿಯಲ್ಲಿ ವಿದೇಶೀಯರಾದ ಯಾರೇ ಪ್ರಯಾಣಿಕರಿಗೆ ಅಥವಾ ಚಾಲಕ–ಸಿಬ್ಬಂದಿ ವರ್ಗದ ಸದಸ್ಯರ ಸಂಬಂಧದಲ್ಲಿ ನಿಯಮಿಸಲಾದ ವಿವರಗಳನ್ನು ನೀಡುವ ವಿವರಪಟ್ಟಿಯನ್ನು ಒದಗಿಸತಕ್ಕದ್ದು.

(2) ಯಾರೇ ಜಿಲ್ಲಾ ಮ್ಯಾಜಿಸ್ಟ್ರೇಟನು ಮತ್ತು ಯಾರೇ ಪೊಲೀಸ್ ಕಮೀಷನರನು ಅಥವಾ ಪೊಲೀಸ್ ಕಮೀಷನರು ಇಲ್ಲದಿರುವಲ್ಲಿ ಯಾರೇ ಪೊಲೀಸ್ ಸೂಪರಿಂಟೆಂಡೆಂಟನು, ಈ ಅಧಿನಿಯಮವನ್ನು ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಸಂದರ್ಭಾನುಸಾರ ಅಂಥ ಹಡಗಿನಲ್ಲಿನ ಅಥವಾ ವಿಮಾನದಲ್ಲಿನ ಪ್ರಯಾಣಿಕರ ಅಥವಾ ಚಾಲಕ–ಸಿಬ್ಬಂದಿ ವರ್ಗದ ಸದಸ್ಯರ ಸಂಬಂಧದಲ್ಲಿ ನಿಯಮಿಸಬಹುದಾದಂಥ ಮಾಹಿತಿಯನ್ನು ಒದಗಿಸುವಂತೆ ಅಂಥ ಯಾವುದೇ ಹಡಗಿನ ಮಾಸ್ಟರನನ್ನು ಅಥವಾ ವಿಮಾನದ ಚಾಲಕನನ್ನು ಅಗತ್ಯಪಡಿಸಬಹುದು.

(3) ಅಂಥ ಹಡಗಿನಲ್ಲಿನ ಅಥವಾ ವಿಮಾನದಲ್ಲಿನ ಯಾರೇ ಪ್ರಯಾಣಿಕನು ಮತ್ತು ಹಡಗು ಅಥವಾ ವಿಮಾನದ ಚಾಲಕ–ಸಿಬ್ಬಂದಿ ವರ್ಗದ ಯಾರೇ ಸದಸ್ಯನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿವರಪಟ್ಟಿಯನ್ನು ಒದಗಿಸುವ ಉದ್ದೇಶಕ್ಕಾಗಿ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದ ಮಾಹಿತಿಯನ್ನು ಒದಗಿಸುವುದಕ್ಕಾಗಿ ಸಂದರ್ಭಾನುಸಾರ ಹಡಗಿನ ಮಾಸ್ಟರನಿಗೆ ಅಥವಾ ವಿಮಾನದ ಚಾಲಕನಿಗೆ ಅಗತ್ಯವಿರುವ ಯಾವುದೇ ಮಾಹಿತಿಯನ್ನು ಒದಗಿಸತಕ್ಕದ್ದು.

(4) ಯಾರೇ ವಿದೇಶೀಯನು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ ಭಾರತದಲ್ಲಿ ಪ್ರವೇಶಿಸಿದರೆ, ನಿಯಮಿಸಲಾದ ಪ್ರಾಧಿಕಾರಿಯು, ಹಾಗೆ ಪ್ರವೇಶಿಸಿದ ದಿನಾಂಕದಿಂದ ಎರಡು ತಿಂಗಳೊಳಗಾಗಿ, ಯಾವ ಹಡಗು ಅಥವಾ ವಿಮಾನದ ಮೂಲಕ ಹಾಗೆ ಪ್ರವೇಶಿಸಿದ್ದನೋ, ಆ ಹಡಗಿನ ಮಾಸ್ಟರನನ್ನು ಅಥವಾ ವಿಮಾನದ ಚಾಲಕನನ್ನು ಅಥವಾ ಅಂಥ ಹಡಗಿನ ಅಥವಾ ವಿಮಾನದ ಮಾಲೀಕನನ್ನು ಅಥವಾ ಮಾಲೀಕನ ಏಜೆಂಟನನ್ನು, ಸದರಿ ಪ್ರಾಧಿಕಾರಿಗೆ ಮನವರಿಕೆಯಾಗುವಂತೆ ಮತ್ತು ಸರ್ಕಾರಿ ವೆಚ್ಚದಲ್ಲಿ ಮತ್ತು ಅನ್ಯಥಾ ಸದರಿ ವಿದೇಶೀಯನನ್ನು ಭಾರತದಿಂದ ಹೊರಗೆ ಕಳುಹಿಸುವ ಉದ್ದೇಶಕ್ಕಾಗಿ ಹಡಗಿನಲ್ಲಿ ಅಥವಾ ವಿಮಾನದಲ್ಲಿ ಸ್ಥಳಾವಕಾಶ ಮಾಡಿಕೊಡಲು ನಿರ್ದೇಶಿಸಬಹುದು.

(5) ಭಾರತದಲ್ಲಿನ ಬಂದರಿನಿಂದ ಅಥವಾ ಸ್ಥಳದಿಂದ ಭಾರತದ ಹೊರಗೆ ಯಾವುದೇ ಗಮ್ಯ ಸ್ಥಾನಕ್ಕೆ ಪ್ರಯಾಣಿಕರನ್ನು ಸಾಗಿಸಲಿರುವ ಯಾವುದೇ ಹಡಗಿನ ಮಾಸ್ಟರ್ ಅಥವಾ ಯಾವುದೇ ವಿಮಾನದ ಚಾಲಕನು ಅಥವಾ ಅಂಥ ಹಡಗಿನ ಅಥವಾ ವಿಮಾನದ ಒಡೆಯನು ಅಥವಾ ಒಡೆಯನ ಏಜೆಂಟನು, ಕೇಂದ್ರ ಸರ್ಕಾರವು ಹಾಗೆ ನಿರ್ದೇಶಿಸಿದ್ದರೆ ಮತ್ತು ಅದಕ್ಕೋಸ್ಕರ ಚಾಲ್ತಿ ದರಗಳಲ್ಲಿ ಸಂದಾಯವನ್ನು ಮಾಡಿದ ತರುವಾಯ 3ನೇ ಪ್ರಕರಣದ ಮೇರೆಗೆ ಭಾರತದಲ್ಲಿ ಉಳಿಯಕೂಡದೆಂದು ಆದೇಶಿಸಲಾದ ಯಾರೇ ವಿದೇಶೀಯನಿಗೆ ಮತ್ತು ಅವನೊಡನೆ ಪ್ರಯಾಣ ಮಾಡುವ ಅವನ ಆಶ್ರಿತರು ಯಾರಾದರೂ ಇದ್ದರೆ, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಭಾರತದ ಹೊರಗೆ ಇರುವ ಯಾವ ಬಂದರು

ಅಥವಾ ಸ್ಥಳಕ್ಕೆ ಹಡಗು ಅಥವಾ ವಿಮಾನವು ತಲುಪಲಿದೆಯೋ ಅಂಥ ಬಂದರು ಅಥವಾ ಸ್ಥಳಕ್ಕೆ ಹೋಗಲು ಅವರಿಗೆ ಹಡಗಿನಲ್ಲಿ ಅಥವಾ ವಿಮಾನದಲ್ಲಿ ಸ್ಥಳಾವಕಾಶ ಮಾಡಿಕೊಡತಕ್ಕದ್ದು.

(6) ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) 'ಹಡಗಿನ ಮಾಸ್ಟರ್' ಮತ್ತು 'ಯಾವುದೇ ವಿಮಾನದ ಚಾಲಕ' ಎಂಬವುಗಳು ಸಂದರ್ಭಾನುಸಾರ ಅಂಥ ಮಾಸ್ಟರನಿಂದ ಅಥವಾ ಚಾಲಕನಿಂದ ಈ ಪ್ರಕರಣದ ಮೂಲಕ ಅವನ ಮೇಲೆ ವಿಧಿಸಿದ ಯಾವುದೇ ಕರ್ತವ್ಯಗಳನ್ನು ತನ್ನ ಪರವಾಗಿ ನಿರ್ವಹಿಸುವುದಕ್ಕಾಗಿ ಅಧಿಕಾರ ಹೊಂದಿದ ಯಾರೇ ವ್ಯಕ್ತಿಯನ್ನು ಒಳಗೊಳ್ಳತಕ್ಕದ್ದು;

(ಬಿ) 'ಪ್ರಯಾಣಿಕ' ಎಂದರೆ, ನೌಕರ ವರ್ಗದ ವಾಸ್ತವಿಕ ಸದಸ್ಯನಾಗಿರದಿದ್ದು ಹಡಗಿನಲ್ಲಿ ಅಥವಾ ವಿಮಾನದಲ್ಲಿ ಪ್ರಯಾಣ ಮಾಡುವ ಅಥವಾ ಪ್ರಯಾಣ ಮಾಡಲು ಕೋರುವ ಯಾರೇ ವ್ಯಕ್ತಿ.

**7. ವಿವರಗಳನ್ನು ಒದಗಿಸಲು ಹೋಟೆಲ್ ನಡೆಸುವವರು ಮತ್ತು ಇತರರ ಹೊಣೆಗಾರಿಕೆ.–** (1) ಪ್ರತಿಫಲಕ್ಕಾಗಿ ವಸತಿ ಅಥವಾ ಮಲಗಲು ಸ್ಥಳಾವಕಾಶವನ್ನು ಮಾಡಿಕೊಡುವ ಯಾವುದೇ ಸುಸಜ್ಜಿತ ಅಥವಾ ಸುಸಜ್ಜಿತವಲ್ಲದ ಆವರಣವನ್ನು ಇಟ್ಟುಕೊಂಡಿರುವವನು ಅಂಥ ಆವರಣದಲ್ಲಿ ಸ್ಥಳಾವಕಾಶ ಪಡೆದ ವಿದೇಶೀಯರ ಸಂಬಂಧದಲ್ಲಿ ನಿಯಮಿಸಬಹುದಾದಂಥ ವ್ಯಕ್ತಿಗೆ ಅಂಥ ರೀತಿಯಲ್ಲಿ ಅಂಥ ಮಾಹಿತಿಯನ್ನು ಒಪ್ಪಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಮಾಹಿತಿಯು ಅಂಥ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಡಲಾದ ಎಲ್ಲಾ ಅಥವಾ ಯಾರೇ ವಿದೇಶೀಯನಿಗೆ ಸಂಬಂಧಿಸಬಹುದು ಮತ್ತು ಅದನ್ನು ನಿಯತಕಾಲಿಕವಾಗಿ ಅಥವಾ ಯಾವುದೇ ನಿರ್ದಿಷ್ಟ ಕಾಲ ಅಥವಾ ಸಂದರ್ಭದಲ್ಲಿ ಒಪ್ಪಿಸುವಂತೆ ಅಗತ್ಯಪಡಿಸಬಹುದು.

(2) ಅಂಥ ಯಾವುದೇ ಆವರಣದಲ್ಲಿ ಸ್ಥಳಾವಕಾಶ ಪಡೆದ ಪ್ರತಿಯೊಬ್ಬ ವ್ಯಕ್ತಿಯು, ಆ ಆವರಣವನ್ನು ಇಟ್ಟುಕೊಂಡಿರುವವನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮಾಹಿತಿಯನ್ನು ಒದಗಿಸುವ ಉದ್ದೇಶಕ್ಕಾಗಿ ಅವನಿಗೆ ಅಗತ್ಯವಾದಂಥ ವಿವರಗಳನ್ನು ಒಳಗೊಂಡ ಹೇಳಿಕೆಯನ್ನು ಒದಗಿಸತಕ್ಕದ್ದು.

(3) ಅಂಥ ಪ್ರತಿಯೊಂದು ಆವರಣವನ್ನು ಇಟ್ಟುಕೊಂಡಿರುವವನು (1)ನೇ ಉಪಪ್ರಕರಣದ ಅಡಿಯಲ್ಲಿ ತಾನು ಒದಗಿಸಿದ ಮಾಹಿತಿಯ ಮತ್ತು (2)ನೇ ಉಪಪ್ರಕರಣದ ಅಡಿಯಲ್ಲಿ ತಾನು ಪಡೆದ ಮಾಹಿತಿಯ ಬಗ್ಗೆ ದಾಖಲೆಯನ್ನು ಇಡತಕ್ಕದ್ದು ಮತ್ತು ಅಂಥ ದಾಖಲೆಯನ್ನು ನಿಯಮಿಸಬಹುದಾದಂಥ

ರೀತಿಯಲ್ಲಿ ಮತ್ತು ಅಂಥ ಅವಧಿಯವರೆಗೆ ರಕ್ಷಿಸಿಡತಕ್ಕದ್ದು ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟರನಿಂದ ಈ ಸಂಬಂಧದಲ್ಲಿ ಪ್ರಾಧಿಕೃತನಾದ ಯಾರೇ ಪೊಲೀಸ್ ಅಧಿಕಾರಿ ಅಥವಾ ವ್ಯಕ್ತಿಯು ಅದನ್ನು ಎಲ್ಲಾ ಕಾಲಗಳಲ್ಲೂ ಪರಿಶೀಲಿಸಲು ಮುಕ್ತವಾಗಿರತಕ್ಕದ್ದು.

(4) ಈ ಸಂಬಂಧದಲ್ಲಿ ನಿಯಮಿಸಲಾದ ಯಾವುದೇ ಪ್ರದೇಶದಲ್ಲಿ ನಿಯಮಿಸಲಾದ ಪ್ರಾಧಿಕಾರಿಯ, ಆ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಸಂಬಂಧಪಟ್ಟ ವ್ಯಕ್ತಿಗಳಿಗೆ ತಿಳಿಸುವುದಕ್ಕಾಗಿ ಅತ್ಯುತ್ತಮವಾಗಿ ಅಳವಡಿಸಲಾದಂಥ ರೀತಿಯಲ್ಲಿ ಪ್ರಕಟಿಸಿದ ನೋಟೀಸಿನ ಮೂಲಕ ಹಾಗೆ ನಿರ್ದೇಶಿಸಿದರೆ, ಯಾವುದೇ ವಾಸದ ಆವರಣದ ಸ್ವಾಧೀನ ಹೊಂದಿರುವ ಅಥವಾ ಅದನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು, ನಿರ್ದಿಷ್ಟಪಡಿಸಬಹುದಾದಂಥ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದ್ದ ವಿದೇಶೀಯರ ಸಂಬಂಧದಲ್ಲಿ ಮಾಹಿತಿಯನ್ನು ಅಂಥ ವ್ಯಕ್ತಿಗೆ ಮತ್ತು ಅಂಥ ರೀತಿಯಲ್ಲಿ ಒಪ್ಪಿಸುವುದು ಅವನ ಕರ್ತವ್ಯವಾಗಿರತಕ್ಕದ್ದು ಮತ್ತು (2)ನೇ ಉಪಪ್ರಕರಣದ ಉಪಬಂಧಗಳು ಅಂಥ ಯಾವುದೇ ಆವರಣದಲ್ಲಿ ಸ್ಥಳಾವಕಾಶ ಮಾಡಿಕೊಡಲಾಗಿದ್ದ ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯವಾಗತಕ್ಕದ್ದು.

**7ಎ. ವಿದೇಶೀಯರು ಮೇಲಿಂದ ಮೇಲೆ ಬರುತ್ತಿರುವ ಸ್ಥಳಗಳ ನಿಯಂತ್ರಣಕ್ಕೆ ಅಧಿಕಾರ.–** (1) ನಿಯಮಿಸಲಾದ ಪ್ರಾಧಿಕಾರಿಯು ನಿಯಮಿಸಬಹುದಾದ ಷರತ್ತುಗಳಿಗೊಳಪಟ್ಟು, ಯಾವುದೇ ಆವರಣವನ್ನು ಉಪಹಾರ ಗೃಹವಾಗಿ ಅಥವಾ ಸಾರ್ವಜನಿಕರು ಸೇರುವ ಸ್ಥಳ ಅಥವಾ ಮನರಂಜನಾ ಸ್ಥಳವನ್ನಾಗಿ ಅಥವಾ ಕ್ಲಬ್ಬಾಗಿ ಉಪಯೋಗಿಸುತ್ತಿರುವ ಮತ್ತು ವಿದೇಶೀಯರು ಮೇಲಿಂದ ಮೇಲೆ ಬಂದು ಹೋಗುತ್ತಿರುವ ಅಂಥ ಯಾವುದೇ ಆವರಣದ ಒಡೆಯ ಅಥವಾ ಅದನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ವ್ಯಕ್ತಿಗೆ,–

(ಎ) ಅಂಥ ಆವರಣವನ್ನು ಪೂರ್ಣವಾಗಿ ಅಥವಾ ನಿರ್ದಿಷ್ಟಪಡಿಸಿದ ಅವಧಿಗಳಲ್ಲಿ ಮುಚ್ಚುವಂತೆ; ಅಥವಾ

(ಬಿ) ಅಂಥ ಆವರಣವನ್ನು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳ ಮೇರೆಗೆ ಮಾತ್ರ ಉಪಯೋಗಿಸುವಂತೆ ಅಥವಾ ಉಪಯೋಗಿಸಲು ಅನುಮತಿ ನೀಡುವಂತೆ; ಅಥವಾ

(ಸಿ) ಅಂಥ ಆವರಣದಲ್ಲಿ ಎಲ್ಲಾ ವಿದೇಶೀಯರಿಗೆ ಅಥವಾ ನಿರ್ದಿಷ್ಟಪಡಿಸಿದ ಯಾರೇ ವಿದೇಶೀಯನಿಗೆ ಅಥವಾ ವಿದೇಶೀಯ ವರ್ಗಕ್ಕೆ ಪ್ರವೇಶವನ್ನು ನಿರಾಕರಿಸುವಂತೆ

– ನಿರ್ದೇಶಿಸಬಹುದು.

(2) ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ನಿರ್ದೇಶನವನ್ನು ಯಾರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯು ಅಂಥ ನಿರ್ದೇಶನ ಜಾರಿಯಲ್ಲಿರುವಾಗ, ನಿಯಮಿಸಲಾದ ಪ್ರಾಧಿಕಾರಿಯಿಂದ ಲಿಖಿತದಲ್ಲಿ ಪೂರ್ವಾನುಮತಿಯನ್ನು ಪಡೆದಿದ್ದ ಹೊರತು ಮತ್ತು ಪ್ರಾಧಿಕಾರಿಯು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಯಾವುದೇ ಷರತ್ತುಗಳಿಗೆ ಅನುಸಾರವಾಗಿಯಲ್ಲದೆ ಇತರ ಯಾವುದೇ ಆವರಣವನ್ನು ಮೇಲೆ ಹೇಳಿದ ಯಾವುದೇ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸಲು ಅನುಮತಿಯನ್ನು ನೀಡತಕ್ಕದ್ದಲ್ಲ.

(3) ಉಪಪ್ರಕರಣ (1)ರ ಅಡಿಯಲ್ಲಿ ಯಾವುದೇ ನಿರ್ದೇಶನವನ್ನು ಯಾರಿಗೆ ನೀಡಲಾಗಿದೆಯೋ ಮತ್ತು ಅದರಿಂದ ಯಾರು ಬಾಧಿತನಾಗಿದ್ದಾನೆಯೋ ಆ ಯಾರೇ ವ್ಯಕ್ತಿಯು, ಅಂಥ ನಿರ್ದೇಶನದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಬಹುದು ಮತ್ತು ಈ ವಿಷಯದಲ್ಲಿ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**8. ರಾಷ್ಟ್ರೀಯತೆಯ ನಿರ್ಧಾರ.–** (1) ವಿದೇಶೀಯನು ಒಂದು ವಿದೇಶೀ ರಾಷ್ಟ್ರಕ್ಕಿಂತ ಹೆಚ್ಚು ರಾಷ್ಟ್ರಗಳ ಕಾನೂನಿನ ಮೂಲಕ ತಮ್ಮ ದೇಶದವನೆಂದು ಮನ್ನಣೆ ಪಡೆದಿರುವಾಗ ಅಥವಾ ಯಾವುದೇ ಕಾರಣಕ್ಕಾಗಿ ಆ ವಿದೇಶೀಯನಿಗೆ ಯಾವ ರಾಷ್ಟ್ರದವನೆಂಬ ಮನ್ನಣೆ ನೀಡಬೇಕು ಎಂಬುದರ ಬಗ್ಗೆ ಅನಿಶ್ಚಿತತೆಯಿರುವಲ್ಲಿ ನಿಯಮಿಸಲಾದ ಪ್ರಾಧಿಕಾರಿಗೆ ಆ ವಿದೇಶೀಯನು ತತ್ಕಾಲದಲ್ಲಿ ಯಾವ ದೇಶದೊಡನೆ ಹಿತಾಸಕ್ತಿ ಅಥವಾ ಸಹಾನುಭೂತಿ ದೃಷ್ಟಿಯಿಂದ ಅತ್ಯಂತ ನಿಕಟವಾಗಿ ಸಂಬಂಧ ಹೊಂದಿದ್ದಾನೆಂದು ಕಂಡುಬರುತ್ತದೋ ಆ ದೇಶದ ಅಥವಾ ಅವನ ರಾಷ್ಟ್ರೀಯತೆಯು ಅನಿಶ್ಚಿತವಾದುದಾಗಿದ್ದರೆ, ಅವನು ಕೊನೆಯಲ್ಲಿ ಯಾವ ದೇಶದೊಡನೆ ಹಾಗೆ ಸಂಬಂಧ ಹೊಂದಿದ್ದನೋ ಆ ದೇಶದ ರಾಷ್ಟ್ರೀಯನೆಂದು ಪರಿಗಣಿಸತಕ್ಕದ್ದು:

ಪರಂತು, ವಿದೇಶೀಯನು ಹುಟ್ಟಿನಿಂದ ರಾಷ್ಟ್ರೀಯತೆಯನ್ನು ಪಡೆದಿರುವಲ್ಲಿ, ಕೇಂದ್ರ ಸರ್ಕಾರವು ಸಾಮಾನ್ಯವಾಗಿ ಅಥವಾ ವಿಶಿಷ್ಟ ಸಂದರ್ಭದಲ್ಲಿ ಹಾಗೆ ನಿರ್ದೇಶಿಸಿದ ಹೊರತು, ತರುವಾಯದಲ್ಲಿ ಅವನು ದೇಶೀಯಕರಣದ ಮೂಲಕ ಅಥವಾ ಅನ್ಯಥಾ ಇತರ ಯಾವುದೇ ರಾಷ್ಟ್ರದ ರಾಷ್ಟ್ರೀಯತೆಯನ್ನು ಪಡೆದಿದ್ದಾನೆಂದು ಮತ್ತು ತಾನು ಹಾಗೆ ಯಾವ ದೇಶದ ರಾಷ್ಟ್ರೀಯತೆಯನ್ನು ಪಡೆದಿರುವನೋ ಆ ದೇಶದ ಸರ್ಕಾರದಿಂದ ಸಂರಕ್ಷಣೆಗೆ ಇನ್ನೂ ಹಕ್ಕುಳ್ಳವನೆಂಬುದಾಗಿ ಮನ್ನಣೆ ಪಡೆದಿರುವನೆಂದು ಸದರಿ ಪ್ರಾಧಿಕಾರಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದ ಹೊರತು ಆ ರಾಷ್ಟ್ರೀಯತೆಯನ್ನು ಉಳಿಸಿಕೊಂಡಿರುತ್ತಾನೆಂದು ಭಾವಿಸತಕ್ಕದ್ದು.

(2) ರಾಷ್ಟ್ರೀಯತೆಯ ಬಗ್ಗೆ (1)ನೇ ಉಪಪ್ರಕರಣದ ಅಡಿಯಲ್ಲಿ ನೀಡಿದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿಯಾಗಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು ತಾನಾಗಿಯೇ ಅಥವಾ ಸಂಬಂಧಪಟ್ಟ ವಿದೇಶೀಯನು ಸಲ್ಲಿಸಿದ ಅರ್ಜಿಯ ಮೇಲೆ ಅಂಥ ಯಾವುದೇ ತೀರ್ಮಾನವನ್ನು ಪುನರೀಕ್ಷಿಸಬಹುದು.

**9. ರುಜುವಾತಿನ ಭಾರ.–** 8ನೇ ಪ್ರಕರಣದೊಳಗೆ ಬಾರದ ಇತರ ಯಾವುದೇ ಸಂದರ್ಭದಲ್ಲಿ, ಈ ಅಧಿನಿಯಮಕ್ಕೆ ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ಆದೇಶಕ್ಕೆ ಅಥವಾ ನೀಡಿದ ನಿರ್ದೇಶನಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯು ವಿದೇಶೀಯನೇ ಅಲ್ಲವೇ ಅಥವಾ ವಿಶಿಷ್ಟ ವರ್ಗದ ಅಥವಾ ವಿವರಣೆಯ ವಿದೇಶೀಯನೇ ಅಲ್ಲವೇ ಎಂಬ ಪ್ರಶ್ನೆಯು ಉದ್ಭವಿಸಿದರೆ, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1) ರಲ್ಲಿ ಏನೇ ಇದ್ದರೂ, ಸಂದರ್ಭಾನುಸಾರ ಅಂಥ ವ್ಯಕ್ತಿಯು ವಿದೇಶೀಯನಲ್ಲ ಅಥವಾ ಅಂಥ ವಿಶಿಷ್ಟ ವರ್ಗದ ಅಥವಾ ವಿವರಣೆಯ ವಿದೇಶೀಯನಲ್ಲವೆಂದು ರುಜುವಾತುಪಡಿಸುವ ಹೊಣೆಯು ಆ ವ್ಯಕ್ತಿಯ ಮೇಲೆ ಇರತಕ್ಕದ್ದು.

**10. [ಈ ಅಧಿನಿಯಮದ ಅನ್ವಯದಿಂದ ವಿನಾಯಿತಿಗೊಳಿಸುವ ಅಧಿಕಾರ.–** ವಿದೇಶೀಯರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1957 (1957ರ 11)ರ 7ನೇ ಪ್ರಕರಣದ ಮೂಲಕ (19–1–1957ರಿಂದ ಪರಿಣಾಮಕಾರಿಯಾಗುವಂತೆ) ನಿರಸಿತವಾಗಿದೆ.]

**11. ಆದೇಶಗಳು, ನಿರ್ದೇಶನಗಳು, ಇತ್ಯಾದಿಗಳನ್ನು ಆಚರಣೆಗೆ ತರುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅಡಿಯಲ್ಲಿ ಅಥವಾ ಅವುಗಳಿಗೆ ಅನುಸಾರವಾಗಿ, ಯಾವುದೇ ನಿರ್ದೇಶನವನ್ನು ನೀಡಲು ಅಥವಾ ಇತರ ಯಾವುದೇ ಅಧಿಕಾರವನ್ನು ಚಲಾಯಿಸಲು ಅಧಿಕಾರ ಹೊಂದಿರುವ ಯಾರೇ ಪ್ರಾಧಿಕಾರಿಯು, ಈ ಅಧಿನಿಯಮದಲ್ಲಿ ವ್ಯಕ್ತವಾಗಿ ಉಪಬಂಧಿಸಿದ ಇತರ ಯಾವುದೇ ಕ್ರಮದ ಜೊತೆಗೆ ಅಂಥ ನಿರ್ದೇಶನದ ಪಾಲನೆ ಆಗುವಂತೆ ನೋಡಿಕೊಳ್ಳುವುದಕ್ಕಾಗಿ ಅಥವಾ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಅಥವಾ ಸರಿಪಡಿಸುವುದಕ್ಕಾಗಿ ಅಥವಾ ಸಂದರ್ಭಾನುಸಾರ ಅಂಥ ಅಧಿಕಾರವನ್ನು ಪರಿಣಾಮಕಾರಿಯಾಗಿ ಚಲಾಯಿಸುವುದಕ್ಕಾಗಿ ತನ್ನ ಅಭಿಪ್ರಾಯವಿದ್ದಲ್ಲಿ, ಯುಕ್ತವಾಗಿ ಅವಶ್ಯಕತೆ ಇರಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ತೆಗೆದುಕೊಳ್ಳುವಂತೆ ಮಾಡಬಹುದು ಮತ್ತು ಅಂಥ ಬಲಪ್ರಯೋಗ ಮಾಡಬಹುದು ಅಥವಾ ಬಲಪ್ರಯೋಗ ಮಾಡುವಂತೆ ಮಾಡಬಹುದು.

(2) ಯಾರೇ ಪೊಲೀಸ್ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಅವುಗಳ ಅನುಸರಣೆಯಲ್ಲಿ ಮಾಡಿದ ಯಾವುದೇ ಆದೇಶದ ಅಥವಾ ನೀಡಿದ ನಿರ್ದೇಶನದ ಪಾಲನೆ ಆಗುವಂತೆ ನೋಡಿಕೊಳ್ಳುವುದಕ್ಕಾಗಿ ಅಥವಾ ಅಂಥ ಆದೇಶದ ಅಥವಾ ನಿರ್ದೇಶನದ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಅಥವಾ ಸರಿಪಡಿಸುವುದಕ್ಕಾಗಿ ತನ್ನ ಅಭಿಪ್ರಾಯದಲ್ಲಿ ಯುಕ್ತವಾಗಿ

ಅವಶ್ಯಕತೆ ಇರಬಹುದಾದ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಅಂಥ ಬಲವನ್ನು ಪ್ರಯೋಗಿಸಬಹುದು.

(3) ಈ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಗೆ ಯಾವುದೇ ಭೂಮಿ ಅಥವಾ ಇತರ ಯಾವುದಾದರೂ ಸ್ವತ್ತಿಗೆ ಪ್ರವೇಶಿಸುವ ಹಕ್ಕನ್ನು ಈ ಅಧಿಕಾರವು ಪ್ರದಾನ ಮಾಡುವುದೆಂದು ಭಾವಿಸತಕ್ಕದ್ದು.

**12. ಅಧಿಕಾರವನ್ನು ಪ್ರತ್ಯಾಯೋಜಿಸುವ ಅಧಿಕಾರ.–** ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಮಾಡಲಾದ ಯಾವುದೇ ಆದೇಶದ ಮೂಲಕ ಯಾವ ಪ್ರಾಧಿಕಾರಿಗೆ ಯಾವುವೇ ನಿರ್ದೇಶನವನ್ನು ಮಾಡುವ ಅಥವಾ ನೀಡುವ, ಸಮ್ಮತಿಸುವ ಅಥವಾ ಅನುಮತಿಸುವ ಅಥವಾ ಯಾವುದೇ ಇತರ ಕಾರ್ಯವನ್ನು ಮಾಡುವ ಅಧಿಕಾರವನ್ನು ಪ್ರದಾನ ಮಾಡಲಾಗಿದೆಯೋ ಆ ಯಾರೇ ಪ್ರಾಧಿಕಾರಿಯು ತದ್ವಿರುದ್ಧವಾಗಿ ವ್ಯಕ್ತ ಉಪಬಂಧವನ್ನು ಮಾಡಿದ ಹೊರತು, ತನ್ನ ಪರವಾಗಿ ಅಂಥ ಅಧಿಕಾರವನ್ನು ಚಲಾಯಿಸಲು ತನಗೆ ಅಧೀನನಾದ ಯಾರೇ ಪ್ರಾಧಿಕಾರಿಯನ್ನು ಲಿಖಿತದ ಮೂಲಕ ಷರತ್ತಿಗೊಳಪಟ್ಟು ಅಥವಾ ಅನ್ಯಥಾ ಅಧಿಕೃತಗೊಳಿಸಬಹುದು ಮತ್ತು ಆ ತರುವಾಯ ಸದರಿ ಅಧೀನ ಪ್ರಾಧಿಕಾರಿಯು, ಆ ಅಧಿಕೃತಗೊಳಿಸುವಿಕೆಯಲ್ಲಿ ಅಡಗಿರಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಮೂಲಕ ಅಥವಾ ಇದರಡಿಯಲ್ಲಿ ಪ್ರದತ್ತವಾದಂಥ ಅಧಿಕಾರವನ್ನು ಹೊಂದಿರುವ ಪ್ರಾಧಿಕಾರಿಯಾಗಿರುವುದಾಗಿ ಭಾವಿಸತಕ್ಕದ್ದು.

**13. ಈ ಅಧಿನಿಯಮದ ಉಪಬಂಧಗಳು ಇತ್ಯಾದಿಗಳನ್ನು ಉಲ್ಲಂಘಿಸುವ ಪ್ರಯತ್ನಗಳು, ಇತ್ಯಾದಿ.–** (1) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ಅಥವಾ ನೀಡಿದ ನಿರ್ದೇಶನವನ್ನು ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ದುಷ್ಪ್ರೇರಿಸುವ ಅಥವಾ ದುಷ್ಪ್ರೇರಿಸಲು ಪ್ರಯತ್ನಿಸುವ ಅಥವಾ ಉಲ್ಲಂಘನೆಯ ಪೂರ್ವಭಾವಿಯಾಗಿ ಯಾವುದೇ ಕಾರ್ಯವನ್ನು ಮಾಡುವ ಅಥವಾ ಅಂಥ ಯಾವುದೇ ಆದೇಶದ ಅನುಸರಣೆಯಲ್ಲಿ ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು ಅಥವಾ ನೀಡಿದ ನಿರ್ದೇಶನವನ್ನು ಯಾರೇ ಇತರ ವ್ಯಕ್ತಿಯು ಉಲ್ಲಂಘಿಸಿದ್ದಾನೆಂದು ತಿಳಿದಿರುವ ಅಥವಾ ನಂಬಲು ಯುಕ್ತ ಕಾರಣವಿರುವ ಯಾರೇ ವ್ಯಕ್ತಿಯು, ಸದರಿ ಉಲ್ಲಂಘನೆಯ ಬಗ್ಗೆ ಆ ಇತರ ವ್ಯಕ್ತಿಗೆ ಅವನ ದಸ್ತಗಿರಿ, ಅಧಿವಿಚಾರಣೆ ಅಥವಾ ದಂಡನೆಯನ್ನು ಆ ಮೂಲಕ ತಡೆಗಟ್ಟುವ ಅಥವಾ

ಅದಕ್ಕೆ ಅಡ್ಡಿ ಮಾಡುವ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡುವ ಉದ್ದೇಶದಿಂದ ಯಾವುದೇ ಸಹಾಯವನ್ನು ನೀಡಿದ್ದರೆ, ಆ ಉಲ್ಲಂಘನೆಯನ್ನು ದುಷ್ಪ್ರೇರಿಸಿದ್ದಾನೆಂದು ಭಾವಿಸತಕ್ಕದ್ದು.

(3) 3ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಆದೇಶ ಅಥವಾ ಅದರ ಅನುಸರಣೆಯಲ್ಲಿ ನೀಡಿದ ನಿರ್ದೇಶನವನ್ನು ಉಲ್ಲಂಘಿಸಿ ಯಾರೇ ವಿದೇಶೀಯನು ಯಾವ ಹಡಗು ಅಥವಾ ವಿಮಾನದ ಮೂಲಕ ಭಾರತವನ್ನು ಪ್ರವೇಶಿಸುವನೋ ಅಥವಾ ಭಾರತದಿಂದ ಹೊರಡುವನೋ ಸಂದರ್ಭಾನುಸಾರ ಆ ಯಾವುದೇ ಹಡಗಿನ ಮಾಸ್ಟರ್ ಅಥವಾ ಆ ಯಾವುದೇ ವಿಮಾನದ ಚಾಲಕನನ್ನು, ಅವನು ಸದರಿ ಉಲ್ಲಂಘನೆಯನ್ನು ತಡೆಗಟ್ಟಲು ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂಬುದನ್ನು ರುಜುವಾತುಪಡಿಸಿದ ಹೊರತು, ಈ ಅಧಿನಿಯಮವನ್ನು ಉಲ್ಲಂಘಿಸಿದ್ದಾನೆಂದು ಭಾವಿಸತಕ್ಕದ್ದು.

**14. ಈ ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ಇತ್ಯಾದಿಗಳಿಗೆ ದಂಡನೆ.–** (ಎ) ಆತನಿಗೆ ನೀಡಿದ ವೀಸಾ ಅವಧಿಯನ್ನು ಮೀರಿದ ಅವಧಿಯಲ್ಲಿ ಭಾರತದ ಯಾವುದೇ ಪ್ರದೇಶದಲ್ಲಿ ಉಳಿಯುವ;

(ಬಿ) ಆತನಿಗೆ ಭಾರತದಲ್ಲಿ ಪ್ರವೇಶಿಸಲು ಮತ್ತು ಭಾರತದಲ್ಲಿ ಅಥವಾ ಅದರಡಿಯ ಯಾವುದೇ ಭಾಗದಲ್ಲಿ ಉಳಿಯಲು ನೀಡಿದ ಸಿಂಧುತ್ವವುಳ್ಳ ವೀಸಾದ ಷರತ್ತುಗಳ ಉಲ್ಲಂಘನೆಯ ಯಾವುದೇ ಕೃತ್ಯವನ್ನು ಎಸಗುವ;

(ಸಿ) ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರಡಿ ಮಾಡಿದ ಯಾವುದೇ ಆದೇಶವನ್ನು ಅಥವಾ ಈ ಅಧಿನಿಯಮದ ಅನುಸಾರವಾಗಿ ನೀಡಿದ ಯಾವುದೇ ನಿರ್ದೇಶನವನ್ನು ಅಥವಾ ಈ ಅಧಿನಿಯಮದಡಿಯಲ್ಲಿ ಯಾವುದೇ ನಿರ್ದಿಷ್ಟ ಶಿಕ್ಷೆಗೆ ಉಪಬಂಧ ಕಲ್ಪಿಸಿದುದರ ಸಂಬಂಧದಲ್ಲಿ ಅಂಥ ಆದೇಶವನ್ನು ಉಲ್ಲಂಘಿಸುವ

– ಯಾರೇ ವ್ಯಕ್ತಿಯು ಐದು ವರ್ಷಗಳಿಗೆ ವಿಸ್ತರಿಸಬಹುದಾದ ಒಂದು ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು ಮತ್ತು 3ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡಕ್ಕೆ ಅನುಸಾರವಾಗಿ ಒಂದು ಮುಚ್ಚಳಿಕೆ ಬರೆದುಕೊಟ್ಟಿದ್ದರೆ ಅವನ ಮುಚ್ಚಳಿಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಅದಕ್ಕೆ ಬದ್ಧನಾದ ಯಾರೇ ವ್ಯಕ್ತಿಯು ದಂಡವನ್ನು ಸಂದಾಯ ಮಾಡತಕ್ಕದ್ದು ಅಥವಾ ತಾನು ಅಂಥ ದಂಡವನ್ನು ಏಕೆ ಸಂದಾಯ ಮಾಡತಕ್ಕದ್ದಲ್ಲವೆಂಬ ಬಗ್ಗೆ ಅಪರಾಧ ನಿರ್ಣಯ ಮಾಡುವ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ಕಾರಣವನ್ನು ತೋರಿಸತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ 'ವೀಸಾ' ಎಂಬ ಪದಕ್ಕೆ ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34) ರ ಅಡಿಯಲ್ಲಿ ರಚಿಸಿದ ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ನಿಯಮಗಳು, 1950ರ ಅಡಿಯಲ್ಲಿ ಅದಕ್ಕೆ ಕೊಡಲಾದ ಅರ್ಥವೇ ಇರತಕ್ಕದ್ದು.

**14ಎ. ನಿರ್ಬಂಧಿತ ಪ್ರದೇಶಗಳೊಳಗೆ ಪ್ರವೇಶಿಸಿದ್ದಕ್ಕಾಗಿ ದಂಡ ಇತ್ಯಾದಿ.–** ಯಾರೇ ವ್ಯಕ್ತಿ,–

(ಎ) ಈ ಅಧಿನಿಯಮದಡಿಯಲ್ಲಿ ಮಾಡಿದ ಯಾವುದೇ ಆದೇಶದ ಅಡಿಯಲ್ಲಿ ಅಥವಾ ಅದಕ್ಕನುಸಾರವಾಗಿ ನೀಡಿದ ಯಾವುದೇ ನಿರ್ದೇಶನದ ಅಡಿಯಲ್ಲಿ ಅವನ ಪ್ರವೇಶವನ್ನು ನಿರ್ಬಂಧಿಸಲಾಗಿರುವ, ಭಾರತದಲ್ಲಿಯ ಯಾವುದೇ ಪ್ರದೇಶವನ್ನು ಈ ಉದ್ದೇಶಕ್ಕಾಗಿ ಸರ್ಕಾರಿ ರಾಜಪತ್ರದಲ್ಲಿ ಕೇಂದ್ರ ಸರ್ಕಾರವು ಅಧಿಸೂಚಿಸಿದ ಪ್ರಾಧಿಕಾರದ ಅನುಮತಿಯನ್ನು ಪಡೆದುಕೊಳ್ಳದೆ ಪ್ರವೇಶಿಸಿದರೆ ಅಥವಾ ಅವನು ಇರುವುದಕ್ಕಾಗಿ ಅಂಥ ಅನುಮತಿ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಅವಧಿಗೆ ಮೀರಿ ಅಂಥ ಪ್ರದೇಶದಲ್ಲಿ ಉಳಿದುಕೊಂಡರೆ; ಅಥವಾ

(ಬಿ) ಈ ಅಧಿನಿಯಮದಡಿಯಲ್ಲಿ ಮಾಡಿದ ಯಾವುದೇ ಆದೇಶದ ಅಡಿಯಲ್ಲಿ ಅಥವಾ ಅದಕ್ಕನುಸಾರವಾಗಿ ನೀಡಿದ ಯಾವುದೇ ನಿರ್ದೇಶನದ ಉಪಬಂಧಗಳ ಅಡಿಯಲ್ಲಿ ಹಾಗೆ ಪ್ರವೇಶಿಸುವುದಕ್ಕಾಗಿ ಅಥವಾ ಇರುವುದಕ್ಕಾಗಿ ಅಗತ್ಯಪಡಿಸಿದ ಮಾನ್ಯವಾದ ದಸ್ತಾವೇಜುಗಳಿಲ್ಲದೆ ಭಾರತದಲ್ಲಿ ಯಾವುದೇ ಪ್ರದೇಶದಲ್ಲಿ ಪ್ರವೇಶಿಸಿದರೆ ಅಥವಾ ಉಳಿದುಕೊಂಡರೆ

– ಎರಡು ವರ್ಷಗಳಿಗೆ ಕಡಿಮೆಯಲ್ಲದ ಆದರೆ ಎಂಟು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಜುಲ್ಮಾನೆಗೆ ಸಹ ಗುರಿಯಾಗತಕ್ಕದ್ದು ಮತ್ತು 3ನೇ ಪ್ರಕರಣದ (2)ನೇ ಉಪಪ್ರಕರಣದ (ಎಫ್) ಖಂಡದ ಅನುಸಾರವಾಗಿ ಅವನು ಒಂದು ಬಂಧಪತ್ರವನ್ನು ಬರೆದುಕೊಟ್ಟಿದ್ದರೆ ಆ ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಅದಕ್ಕೆ ಬದ್ಧನಾದ ಯಾರೇ ವ್ಯಕ್ತಿಯು ಆ ಸಂಬಂಧದಲ್ಲಿಯ ದಂಡವನ್ನು ಸಂದಾಯ ಮಾಡತಕ್ಕದ್ದು ಅಥವಾ ಅಂಥ ದಂಡವನ್ನು ತಾನು ಏಕೆ ಸಂದಾಯ ಮಾಡತಕ್ಕದ್ದಲ್ಲ ಎಂಬ ಬಗ್ಗೆ ಅಪರಾಧ ನಿರ್ಣಯ ಮಾಡುವ ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ಕಾರಣವನ್ನು ತೋರಿಸತಕ್ಕದ್ದು.

**14ಬಿ. ಖೋಟಾ ಪಾಸ್‌ಪೋರ್ಟ್ ಅನ್ನು ಬಳಸಿದ್ದಕ್ಕಾಗಿ ದಂಡ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಪ್ರಾಧಿಕಾರವಿಲ್ಲದೆ ಭಾರತದಲ್ಲಿ ಪ್ರವೇಶಿಸುವ ಮತ್ತು ಅಲ್ಲಿ ಉಳಿದುಕೊಳ್ಳುವುದಕ್ಕಾಗಿ ತಿಳಿದೂ ತಿಳಿದೂ ಖೋಟಾ ಪಾಸ್‌ಪೋರ್ಟನ್ನು ಬಳಸುವ ಯಾವೊಬ್ಬನು, ಎರಡು ವರ್ಷಗಳಿಗೆ ಕಡಿಮೆಯಲ್ಲದ ಎಂಟು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು ಮತ್ತು ಹತ್ತು ಸಾವಿರ ರೂಪಾಯಿಗಳ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಸಹ ಗುರಿಯಾಗತಕ್ಕದ್ದು.

**14ಸಿ. ದುಷ್ಪ್ರೇರಣೆಗಾಗಿ ದಂಡ.–** 14ನೇ ಪ್ರಕರಣದ ಅಥವಾ 14ಎ ಪ್ರಕರಣದ ಅಥವಾ 14ಬಿ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹವಾದ ಯಾವುದೇ ಅಪರಾಧದ ಬಗ್ಗೆ ದುಷ್ಪ್ರೇರೇಪಿಸುವ ಯಾವೊಬ್ಬನು, ದುಷ್ಪ್ರೇರೇಪಿಸಿದ ಕೃತ್ಯವು ದುಷ್ಪ್ರೇರಣೆಯ ಪರಿಣಾಮವಾಗಿ ಘಟಿಸಿದ್ದರೆ ಆ ಅಪರಾಧಕ್ಕಾಗಿ ಉಪಬಂಧಿಸಲಾದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ,–

(i) ಪ್ರಚೋದನೆಯ ಪರಿಣಾಮವಾಗಿ ಅಥವಾ ಒಳಸಂಚಿಗೆ ಅನುಸಾರವಾಗಿ ಅಥವಾ ಅಪರಾಧವಾಗುವುದಕ್ಕೆ ಸಹಾಯಕವಾಗುವುದರ ಜೊತೆಯಲ್ಲಿ ಅದನ್ನು ಮಾಡಿದ್ದಾಗ, ದುಷ್ಪ್ರೇರಣೆಯ ಪರಿಣಾಮವಾಗಿ ಕೃತ್ಯವನ್ನು ಅಥವಾ ಅಪರಾಧವನ್ನು ಮಾಡಲಾಗಿದೆ ಎಂದು ಹೇಳಲಾಗುತ್ತದೆ;

(ii) 'ದುಷ್ಪ್ರೇರಣೆ' ಎಂಬ ಪದವು ಭಾರತ ದಂಡ ಸಂಹಿತೆ, 1860 (1860ರ 45)ರ 107ನೇ ಪ್ರಕರಣದ ಅಡಿಯಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**15. ಈ ಅಧಿನಿಯಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿಗೆ ಸಂರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**16. ಇತರ ಕಾನೂನುಗಳ ಅನ್ವಯ ಪ್ರತಿಷೇಧಿತವಲ್ಲ.–** ಈ ಅಧಿನಿಯಮದ ಉಪಬಂಧಗಳು ವಿದೇಶೀಯರ ನೋಂದಣಿ ಅಧಿನಿಯಮ, 1939 (1939ರ 16), ಭಾರತ ಪಾಸ್‌ಪೋರ್ಟ್ ಅಧಿನಿಯಮ, 1920 (1920ರ 34) ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತ ಉಪಬಂಧಗಳ ಜೊತೆಯಲ್ಲಿ ಮತ್ತು ಅವುಗಳನ್ನು ಅಲ್ಪೀಕರಿಸದಂತೆ ಇರತಕ್ಕದ್ದು.

**17. ನಿರಸನಗಳು.–** ನಿರಸನ ಮತ್ತು ತಿದ್ದುಪಡಿ ಅಧಿನಿಯಮ, 1950 (1950ರ 35)ರ 2ನೇ ಪ್ರಕರಣದ ಮತ್ತು 1ನೇ ಅನುಸೂಚಿಯ ಮೂಲಕ ನಿರಸಿತವಾಗಿದೆ.]